**OS No.08/2014**
**DW-1**

ಸಾಕ್ಷಿಯನ್ನು ದಿಃ **29.11.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಎ ಎಲ್ ಎಸ್ ವಕೀಲರಿಂದಃ

ಹಿರಿಯೂರು ಗ್ರಾಮದಲ್ಲಿ ನನ್ನ ಜಮೀನಿನ ಪಶ್ಚಿಮದ ಕಡೆಗೆ **1** ಎಕರೆ **21** ಗುಂಟೆ ವಾದಿಗೆ ಸೇರಿದ ಜಮೀನು ಇದೆ ಎಂದರೆ ಸರಿ. ಅವರ ಜಮೀನಿನ ಮೊದಲ ಪಶ್ಚಿಮಕ್ಕೆ **1** ನೇ ಪ್ರತಿವಾದಿಯ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದರೆ ಸರಿ. ನನ್ನ ಜಮೀನಿನ ಪಶ್ಚಿಮದ ಕಡೆ ಜಯಶಂಕರ್ ಅವರು ಜಮೀನು ಇದೆ ಎಂದರೆ ಸರಿ. ನಮ್ಮ ಜಮೀನನ್ನು ಅಳತೆ ಮಾಡಲು ಸರ್ವೆ ಇಲಾಖೆಗೆ ನೀಡಿದ ಅರ್ಜಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸರ್ವೆ ಇಲಾಖೆಯವರು ಅಳತೆ ಮಾಡಲು ಬರುವ ಸಂಬಂದ ನನಗೆ ಮತ್ತು ಬೀರೇಶ್ ಅವರಿಗೆ ನೋಟೀಸನ್ನು ಕೊಟ್ಟಿರುತ್ತಾರೆ. ಸದರಿ ಅಳತೆ ವರದಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಮಹಜರ್ ಮಾಡಿರುತ್ತಾರೆ ಸದರಿ ದಾಖಲೆಯನ್ನು ಸಹ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸದರಿ ಮಹಜರ್ ಗೆ ಶಿವಣ್ಣ, ಪ್ರಭುಸ್ವಾ ಮಿ ಅವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಬೀರೇಶ್ ಅವರ ಆಸ್ತಿಯ ಪೂರ್ವಕ್ಕೆ ರಸ್ತೆ ಇದೆ ಎಂದು ಹೇಳಿರುತ್ತೇನೆ, ಆ ಸಂಬಂದ ದಾಖಲೆ ಕೊಟ್ಟಿರುವುದಿಲ್ಲ. ನಾನು ಮತ್ತು **2** ನೇ ಪ್ರತಿವಾದಿ ವಾದಿಯ ಜಮೀನಿನಲ್ಲಿ ತಲಾ **3** ಗುಂಟೆ ಆಸ್ತಿಯನ್ನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನಿನಲ್ಲಿ ನಮ್ಮ ವಿಸ್ತೀರ್ಣಕ್ಕೆ ನಾನೇ ಕಲ್ಲನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಯಾವುದೇ ರೀತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಒತ್ತುವರಿ ಮಾಡಿರುವ ಜಾಗವನ್ನು ಬಿಟ್ಟುಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿ, **2** ನೇ ಪ್ರತಿವಾದಿಯ ಜಮೀನುಗಳು ಒಂದೇ ಸರ್ವೇ ನಂಬರ್ ನಲ್ಲಿ ಬರುತ್ತದೆ ಎಂದರೆ ಸರಿ. ನನ್ನ ಮತ್ತು **2** ನೇ ಪ್ರತಿವಾದಿಗೆ ಸೇರಿದ **1** ಎಕರೆ **21** ಗುಂಟೆಗೆ ಪ್ರತ್ಯೇಕವಾಗಿ ಪೋಡು ಮಾಡಿರುದಿಲ್ಲ ಎಂದರೆ

ಸರಿ. ಆ ರೀತಿ ಪೋಡು ಮಾಡಿಕೊಳ್ಳಲು ಯಾವುದೇ ತೊಂದರೆ ಇಲ್ಲ. ನ್ಯಾಯಾಲಯದಿಂದ ಅಳತೆ ಮಾಡಲು ಆದೇಶ ಮಾಡುವುದಕ್ಕೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.
**(**ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತಾರೆ.**)**

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ